ಇ. ಬೆಂಗಳೂರು ನಗರದಲ್ಲಿ ವಾಹನಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದು ವಾಹನಗಳಿಂದಾಗುವ ವಾಯು ಮಾಲಿನ್ಯ ಪ್ರಮಾಣ ನಿಯಂತ್ರಿಸುವ ಮತ್ತು ಸಾರ್ವಜನಿಕ ಆರೋಗ್ಯ ಹಿತದೃಷ್ಟಿಯಿಂದ ಆ ಆದೇಶವನ್ನು ಕೈಬಿಡುವ ಉದ್ದೇಶ ಸರ್ಕಾರಕ್ಕೆ ಇರುವುದಿಲ್ಲ.

ಬೆಂಗಳೂರು ನಗರದಲ್ಲಿ ನಗರ ಪಾಲಿಕೆ ಆಟದ ಮೈದಾನಗಳಲ್ಲಿ ಟೆನಿಸ್ ಕೋರ್ಟ್ ನಿರ್ಮಿಸುವುದು

187(49) ಶ್ರೀ ವಿ. ಸೋಮಣ್ಣ(ಚಿಕ್ಕಪೇಟೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಂಗಳೂರು ನಗರದಲ್ಲಿ ಮಹಾನಗರ ಪಾಲಿಕೆಯ ವರ್ಷದಲ್ಲಿರುವ ಆಟದ ಮೈದಾನಗಳೆಷ್ಟು?

ಆ. ಇವುಗಳ ಪೈಕಿ ಎಷ್ಟು ಅಂದ ಮೈದಾನಗಳು ಬಿನ್ನಿಮೇಲೆ ವಿಧಾನ ಸಭಾ ಕ್ಷೇತ್ರದಲ್ಲಿವೆ?

ಇ. ಈ ಆಟದ ಮೈದಾನಗಳಲ್ಲಿ ಟೆನ್ನಿಸ್ ಕೋರ್ಟ್‌ಗಳನ್ನು ನಿರ್ಮಿಸಲು ಕರ್ನಾಟಕ ಲಾನ್ ಟೆನ್ನಿಸ್ ಸಂಘಕ್ಕೆ ಈ ಮೈದಾನಗಳನ್ನು ನೀಡಲು ಸರ್ಕಾರದ ನಿರ್ಧರಿಸಿದೆಯೇ?

ಶ್ರೀ ಎಸ್.ಎಂ ಕೃಷ್ಣ (ಮುಖ್ಯಮಂತ್ರಿಗಳು)

ಅ. 169

ಆ. 24

ಇ. ಮೇಲಿನ ಆಟದ ಮೈದಾನಗಳಲ್ಲಿ ಅನುಮತಿ ನೀಡಿರುವುದಿಲ್ಲ

ರಾಜ್ಯದಲ್ಲಿ ಪ್ಲೇವಿನ್ ಆನ್‌ಲೈನ್ ಲಾಟರಿ ನಿಷೇಧಿಸುವುದು

188(57) ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ನಡೆಯುತ್ತಿರುವ ಪ್ಲೇವಿನ್ ಕಂಪನಿಯ ಆನಲೈನ್ ಲಾಟರಿಗಳು ಯಾವುವು:

ಆ. ಕರ್ನಾಟಕ ಸರ್ಕಾರವು ಪ್ಲೇವಿನ್ ಕಂಪನಿಯ ಸಹಯೋಗದಿಂದ ಪ್ರತಿದಿನ ಲಕ್ಕಿ 3 ಎಂಬ ಆನ್‌ಲೈನ್ ಲಾಟರಿಯನ್ನು ಯಾವಾಗಿನಿಂದ ನಡೆಸುತ್ತಿದೆ.

ಇ. ರಾಜ್ಯ ಸರ್ಕಾರಕ್ಕೆ ಇದರಿಂದ ಇಲ್ಲಿಯವರೆಗೆ ಬಂದ ವರಮಾನವೆಷ್ಟು?

ಈ. ಈ ರಾಜ್ಯ ಸರ್ಕಾರದ ಹಾಗೂ ಸಿಕ್ಕಿಂ ಸರ್ಕಾರಗಳ ಆನ್‌ಲೈನ್ ಲಾಟರಿಯಿಂದ ರಾಜ್ಯದಲ್ಲಿ ಬಡವರು, ಮಧ್ಯಮ ವರ್ಗದವರು ಹಾಗೂ ಕೂಲಿಕಾರರು ತಮ್ಮ ಸಂಪಾದನೆಯನ್ನೆಲ್ಲಾ ವ್ಯಯ ಮಾಡಿಬೀದಿ ಪಾಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಉ. ಈ ಲಾಟರಿಯಿಂದ ನೂರಾರು ಬಡವರು ಮಾನಸಿಕ ರೋಗಿಗಳಾಗಿ ನಿಮ್ಹಾನ್ಸ್ ಸೇರಿರುವುದು ನಿಜವಲ್ಲವೇ.

ಊ. ತಮಿಳು ನಾಡಿನಲ್ಲಿ ಈ ಲಾಟರಿಯನ್ನು ನಿಷೇಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಋ. ರಾಜ್ಯದಲ್ಲೂ ಸಹ ಈ ಪ್ಲೇವಿನ್ ಕಂಪನಿ ನಡೆಸುತ್ತಿರುವ ಎಲ್ಲಾ ಆನ್‌ಲೈನ್ ಲಾಟರಿಗಳನ್ನು ನಿಷೇಧಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ;